ಹೋದಂತೆ ಕನ್ನಡ ಸಿನಿಮಾಗಳಿಂದ ದೂರವಾಗುತ್ತಿರುವಂತಿದೆ. ಕನ್ನಡದಲ್ಲಿ ಪ್ರಸಕ್ತ ವರ್ಷ ರಶ್ಮಿಕಾ ಸುದ್ದಿಯಾದುದು ರಕ್ಷಿತ್ ಶೆಟ್ಟಿ ಅವರೊಂದಿಗಿನ ನಿಶ್ಚಿತಾರ್ಥ ಮುರಿದುಕೊಂಡಿದ್ದರಿಂದಲೇ ಹೊರತು ಚಿತ್ರಗಳಿಂದಲ್ಲ.

ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ಇನ್ನೂ ಜಾದೂ ಉಳಿಸಿಕೊಂಡಂತೆ ಕಾಣಿಸುತ್ತಿರುವ ಏಕೈಕ ಹಳೆಯ ಮುಖ ಹರಿಪ್ರಿಯಾ ಅವರದು. ಸಾಕಷ್ಟು ಅವಕಾಶಗಳನ್ನು ಹೊಂದಿರುವ ಅವರು 2019ರಲ್ಲೂ ವರ್ಷಪೂರ್ತಿ ಸುದ್ದಿಯಲ್ಲಿರುವ ಸಾಧ್ಯತೆಯಿದೆ. ಉಳಿದಂತೆ ಒಂದಷ್ಟು ಹೊಸಮುಖಗಳ ಕಣ್ಣಾಮುಚ್ಚಾಲೆ ನಡೆದಿದೆ.

### ಅಳಿಸಲಾಗದ ಕಪ್ಪು ಚುಕ್ಕೆ

ಸಿನಿಮಾಗಳ ಸೋಲಿನ ದೃಷ್ಟಿಯಿಂದ ಮಾತ್ರವಲ್ಲ, ಉದ್ಯಮದಲ್ಲಿನ ಅನಾರೋಗ್ಯಕರ ಘಟನೆಗಳ ದೃಷ್ಟಿಯಿಂದ ಕೂಡ 2018 ಉದ್ಯಮದ ಇತಿಹಾಸದಲ್ಲಿ ಕರಾಳವರ್ಷ. ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ಲೈಂಗಿಕ ಶೋಷಣೆಯ ಬಗ್ಗೆ ಹೆಣ್ಣುಮಕ್ಕಳು ದೇಶದಾದ್ಯಂತ ‘ಮೀ ಟೂ’ ಆಂದೋಲನದಡಿಯಲ್ಲಿ ದನಿ ಎತ್ತಿದರಷ್ಟೇ. ಈ ಆಂದೋಲನಕ್ಕೆ ಕನ್ನಡ ಚಿತ್ರರಂಗದ ನಾಯಕಿಯರೂ ಸ್ಪಂದಿಸಿದರು. ‘ಗಂಡ ಹೆಂಡತಿ’ ಚಿತ್ರದ ನಿರ್ದೇಶಕರು ನನ್ನೊಂದಿಗೆ ಕೆಟ್ಟದಾಗಿ ನಡೆದುಕೊಂಡರೆಂದು ಸಂಜನಾ ಗಲ್ರಾನಿ ದೂರಿದರು. ‘ಎರಡನೇ ಸಲ’ ಚಿತ್ರದ ನಾಯಕಿ ಸಂಗೀತಾ ಭಟ್ ಕೂಡ ಚಿತ್ರರಂಗದಲ್ಲಿನ ತಮ್ಮ ಕಹಿ ಅನುಭವಗಳ ಕುರಿತು ಹೇಳಿಕೊಂಡರು. ಒಂದು ಹೆಜ್ಜೆ ಇನ್ನೂ ಮುಂದೆ ಹೋದ ಶ್ರುತಿ ಹರಿಹರನ್, ‘ವಿಸ್ಮಯ’ ಚಿತ್ರದ ಶೂಟಿಂಗ್ ಸಂದರ್ಭದಲ್ಲಿ ನಾಯಕ ನಟ ಅರ್ಜುನ್ ಸರ್ಜಾ ಅವರಿಂದ ತಮಗೆ ಅಹಿತಕರವಾದ ಅನುಭವವಾಯಿತು ಎಂದು ‘ಸುಧಾ’ಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡರು. ಆ ಸಂದರ್ಶನ ಪ್ರಕಟವಾದದ್ದೇ ಚಿತ್ರೋದ್ಯಮದ ಒಂದು ವಿಲಕ್ಷಣ ಉನ್ಮಾದಕ್ಕೊಳಗಾದಂತೆ ವರ್ತಿಸಿತು.

‘ಮೀ ಟೂ’ ಪ್ರಕರಣದ ಆರೋಪಗಳಿಗೆ ಚಿತ್ರರಂಗ ಪ್ರತಿಕ್ರಿಯಿಸಿದ ರೀತಿ ಹೆಣ್ಣಿನ ಬಗ್ಗೆ ತನಗಿರುವ ಧೋರಣೆ ಯಾವುದೆನ್ನುವುದನ್ನು ಬಯಲುಪಡಿಸುವಂತಿತ್ತು. ಶ್ರುತಿ ಅವರು ತಮ್ಮ ಅನುಭವ ಹೇಳಿಕೊಂಡಾಗ, ಅದನ್ನು ಸಾವಧಾನದಿಂದ ಕೇಳಿಸಿಕೊಳ್ಳುವ ವ್ಯವಧಾನವನ್ನೂ ಚಿತ್ರೋದ್ಯಮದ ಮುಖಂಡರು ವ್ಯಕ್ತಪಡಿಸಲಿಲ್ಲ. ಮೌನವಾಗಿರುವ ‘ಕುರುಸಭೆ’ಯ ಕುರುಡುಜಾಣ್ಮೆಯನ್ನೂ ಪ್ರದರ್ಶಿಸಲಿಲ್ಲ. ಬದಲಿಗೆ ನಾಯಕನಟ ತಪ್ಪು ಮಾಡಲಿಕ್ಕೆ ಸಾಧ್ಯವೇ ಇಲ್ಲ ಎನ್ನುವ ಧೋರಣೆ ವ್ಯಕ್ತಪಡಿಸಿ,



‘ಚಿಟ್ಟೆ’ಯಾದರೂ ಹಚ್ಚೆಗಾಗಿ ಯಜ್ಞಾ ಶೆಟ್ಟಿ...








ತಿಥಿ, ವಾರ, ನಕ್ಷತ್ರ, ಪ್ರಮುಖ ಉತ್ಸವ, ಸರ್ಕಾರಿ ರಜೆಗಳ ಸ್ಪಷ್ಟ ವಿವರ

ವರ್ಷದ ಸಮಗ್ರ ಮಾರ್ಗದರ್ಶಿ

ಬೆಲೆ ₹25 ಮಾತ್ರ

2019

ದಿನದರ್ಶಿಕೆ ಮಾರುಕಟ್ಟೆಯಲ್ಲಿ ಲಭ್ಯ

ಪ್ರತಿಗಳಿಗಾಗಿ ಸಂಪರ್ಕಿಸಿ: ನಿಮ್ಮ ನ್ಯೂಸ್ ಏಜೆಂಟರು, ಪುಸ್ತಕದ ಅಂಗಡಿಗಳು ಅಥವಾ ನಮ್ಮ ಕಚೇರಿಗಳು:

ದಿ ಪ್ರಿಂಟರ್ಸ್(ಮೈಸೂರು) ಪ್ರೈ.ಲಿ., 75, ಎಂ.ಜಿ. ರಸ್ತೆ,
ಬೆಂಗಳೂರು-560 001. ದೂರವಾಣಿ: 25880199/219/227.
ಶಾಖೆಗಳು: ಮೈಸೂರು: 2420532/2420129.
ಹುಬ್ಬಳ್ಳಿ: 2372081/2372516.
ಮಂಗಳೂರು: 2215852/2218334.
ಕಲ್ಬುರ್ಗಿ: 255539/ 221808. ದಾವಣಗೆರೆ: 230846/255048